# ಗಣತಿ ಆಧಾರಿತ ರಾಜ್ಯ ಸಾಧನ ಸಮೀಕ್ಷೆ
# ಅಕ್ಟೋಬರ್-2017

# (CSAS)

## 4 ನೇ ತರಗತಿ

## ಕೋರ್ ವಿಷಯುಗಳ ಮಾದರಿ ಪ್ರಶ್ನೆ ಪತ್ರಿಕೆ ನಮೂನೆ

**(ಕೇವಲ ಅಭ್ಯಾಸಕ್ಕಾಗಿ,ಬದಲಾವಣೆಗೆ ಒಳಪಟ್ಟಿದೆ)**


**ವಿನ್ಯಾಸ ಇಂದ**
**ಅಂಜು ಸಕಲೇಶಪುರ**
**ಸಿ.ಆರ್.ಪಿ ಬೆಳಗೋಡು**
**ಸಕಲೇಶಪುರ**

**ಪ್ರಶ್ನೆಪತ್ರಿಕೆ ತಯಾರಕರು**
**ಮಂಜುಳ ಡಿ ,ಶೇಖರ್ ಸಹ ಶಿಕ್ಷಕರು**
**ಬೆಳಗೋಡು ಕ್ಲಸ್ಟರ್**

# ಗಣತಿ ಆಧಾರಿತ ರಾಜ್ಯ ಸಾಧನ ಸಮೀಕ್ಷೆ ಅಕ್ಟೋಬರ್-2017

## ಮಾದರಿ ಪ್ರಶ್ನೆ ಪತ್ರಿಕೆ

**ತರಗತಿ: 4** **ವಿಷಯ: ಕೋರ್ ವಿಷಯಗಳು**

===============================================================

**ವಿದ್ಯಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು:-**

1.ಪ್ರಶ್ನೆಗಳನ್ನು ನಿಧಾನವಾಗಿ ಓದಿ ಅರ್ಥೈಸಿಕೊಳ್ಳುವುದು.

2.ಪ್ರಶ್ನೆ ಪತ್ರಿಕೆಯ ವರ್ಷನ್ ಸಂಖ್ಯೆಯನ್ನು ಓ.ಎಂ.ಆರ್ ನಲ್ಲಿ ನಿಗಧಿಪಡಿಸಿದ ಸ್ಥಳದಲ್ಲಿ ಕಡ್ಡಾಯವಾಗಿ ಶೇಡ್ ಮಾಡುವುದು.

3.ಪ್ರತಿ ಪ್ರಶ್ನೆಗೆ A B C D ಎಂಬುದಾಗಿ 4 ಆಯ್ಕೆಯ ಉತ್ತರಗಳನ್ನು ನೀಡಲಾಗಿರುತ್ತದೆ.ಅವುಗಳಲ್ಲಿ ಸರಿಯಾದ ಒಂದು ಉತ್ತರಕ್ಕೆ ಮಾತ್ರ ಓ.ಎಂ.ಆರ್ ನಲ್ಲಿ ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡುವುದು.

4.ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿಗೆ ಶೇಡ್ ಮಾಡಬಾರದು.

5. ಓ.ಎಂ.ಆರ್ ನಲ್ಲಿ ಯಾವುದೇ ಚಿತ್ತು,ಕಾಟುಗಳನ್ನು ಮಾಡಬಾರದು.ಹಾಗೂ ಹರಿಯದಂತೆ ಮಡಚದಂತೆ ಜಾಗ್ರತೆ ವಹಿಸುವುದು.

6. ಓ.ಎಂ.ಆರ್ ನಲ್ಲಿ ಸಂಬಂಧಿಸಿದ ಮಾಹಿತಿಗಳನ್ನು ತಪ್ಪದೇ ಭರ್ತಿಮಾಡುವುದು.

7.ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳು ಭರ್ತಿ ಮಾಡಿದ ಎಲ್ಲಾ ಮಾಹಿತಿಗಳನ್ನು ಧೃಡಪಡಿಸಿಕೊಂಡು ಸಹಿ ಮಾಡುವುದು.

8.ಸರಿಯಾದ ಉತ್ತರಕ್ಕೆ ಶೇಡ್ ಮಾಡುವ ವಿಧಾನ ಮಾದರಿ:-

===============================================================

## ಪರಿಸರ ಅಧ್ಯಯನ

---

1.ಪ್ರಾಣಿಗಳಿಂದ ದೊರೆಯುವ ಮಾಂಸ ,ಮೊಟ್ಟೆ ಇತ್ಯಾದಿ ಉತ್ಪನ್ನಗಳನ್ನು ತಿನ್ನುವ ಪ್ರಾಣಿಗಳಿಗೆ ________ಎನ್ನುವರು.

A.ಕೀಟಾಹಾರಿಗಳು

B.ಮಾಂಸಾಹಾರಿಗಳು

C.ಸಸ್ಯಹಾರಿಗಳು

D.ಮಿಶ್ರಹಾರಿಗಳು

2. ಪ್ರಾಣಿ ಪ್ರಪಂಚದಲ್ಲಿ ________ಸಂಖ್ಯೆಯೇ ಅತಿ ಹೆಚ್ಚು.

A.ಪ್ರಾಣಿಗಳು

B.ಕೀಟಗಳು

C.ಪಕ್ಷಿಗಳು

D.ಮಾನವರು

3.ಸಸ್ಯಹಾರಿ ಪ್ರಾಣಿಗಳ ಆಹಾರ______________

A.ಮಕರಂದ

B.ಹುಲ್ಲು

C.ಮಾಂಸ

D.ಹಾಲು

4.ಮಾನವರು ತಿನ್ನುವ ಕೀಟಗಳಿಂದ ಉತ್ಪಾದಿತ ಆಹಾರ____________

A.ಬೆಣ್ಣೆ

B.ಮೊಟ್ಟೆ

C.ಜೇನು ತುಪ್ಪ

D.ಗುಲ್ಕನ್

5.ಕೀಟಾಹಾರಿ ಸಸ್ಯಕ್ಕೆ ಉದಾಹರಣೆ____________

A.ಪಾಪಸ್ಸು ಕಳ್ಳಿ

B.ಹೂಜಿ ಗಿಡ

C.ಗುಲಾಬಿ ಗಿಡ

D.ಬಿದಿರು

6.ಹುಲ್ಲಿನ ಜಾತಿಗೆ ಸೇರಿದ ಸಸ್ಯಕ್ಕೆ ಉದಾಹರಣೆ___________

A.ಮಾವು

B.ಹಲಸ

C.ತೆಂಗು

D.ಬಿದಿರು

7.ಇವುಗಳು ತಮ್ಮ ಜಾಲದಿಂದ ಮಣ್ಣಿನ ಕಣಗಳನ್ನು ಹಿಡಿದಿಡುತ್ತವೆ.

A.ಬೇರು

B.ಕಾಂಡ

C.ಎಲೆ

D.ಬೀಜ

8.ನಾವು ಆಹಾರವಾಗಿ ಬಳಸುವ ಬೇರು.

A.ಕ್ಯಾರಟ್

B.ಶುಂಠಿ

C.ಕಬ್ಬು

D.ಆಲೂಗೆಡ್ಡೆ

9.ಬೇರುಗಳು ಸಸ್ಯಕ್ಕೆ ಬೇಕಾಗುವ ನೀರು ಮತ್ತು ಪೋಷಕಾಂಶಗಳನ್ನು _______ನಿಂದ ಹೀರಿಕೊಳ್ಳುತ್ತೇವೆ.

A.ಕಾಂಡ

B..ಎಲೆ

C.ಮಣ್ಣು

D.ಕೊಂಬೆ

10.ಒಂದು ಮಾರಿಗೆ ______________ಮೊಳಗಳು

A.ಎರಡು

B.ನಾಲ್ಕು

C.ಆರು

D.ಮೂರು

11. ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಹೂ________________

A.ಬ್ರಹ್ಮ ಕಮಲ

B.ಸೂರ್ಯಕಾಂತಿ

C.ರಫ್ಲೇಷಿಯಾ

D.ಬೆಟ್ಟದಾವರೆ

12.ಒಂದು ಕೆ.ಜಿ. ಮಲ್ಲಿಗೆ ಹೂವಿನ ಬೆಲೆ 200 ರೂ ಆದರೆ 5 ಕೆ.ಜಿ ಮಲ್ಲಿಗೆ ಹೂವಿನ ಬೆಲೆ___________

A. 1000 ರೂ

B. 1250 ರೂ

C. 800 ರೂ

D. 500 ರೂ

13.ನೀರು ದ್ರವ ಸ್ಥಿತಿಯಿಂದ ಅನಿಲ ಸ್ಥಿತಿಗೆ ಬರುವುದನ್ನು ___________ ಎನ್ನುವರು.

A.ಆವೀಕರಣ

B.ಘನೀಕರಣ

C.ದ್ರವೀಕರಣ

D.ಉತ್ಪತನ

14. ಕರ್ನಾಟಕದಲ್ಲಿ ಅತಿ ಹೆಚ್ಚು ಮಳೆಬೀಳುವ ಪ್ರದೇಶ_______________

A.ಸಕಲೇಶಪುರ

B.ಆಗುಂಬೆ

C.ಕೆಮ್ಮಣ್ಣುಗುಂಡಿ

D.ಮಡಕೇರಿ

15.ಭೂಮಿಯ ಮೇಲಿರುವ ಸಮುದ್ರ ನೀರಿನ ಪ್ರಮಾಣ______

A.50%

B.30%

C.25%

D.97%

16.ನೀರಿನ ಪ್ರಮುಖ ಆಕರ____________

A.ಬಾವಿ

B.ಕೆರೆ

C.ಮಳೆ

D..ನದಿ

17.ಪುನರ್ಜಲೀಕರಣಕ್ಕಾಗಿ ಔಷದಿ ಅಂಗಡಿಗಳಲ್ಲಿ __________________ದೊರಕುತ್ತದೆ.

A.ಓ.ಆರ್.ಎಸ್

B.ಚುಚ್ಚುಮದ್ದು

C..ಮಾತ್ರೆ

D.ಶರಬತ್ತು

18.ಜೀವ ಸತ್ವ ಎ ಕೊರತೆಯಿಂದ ಬರುವ ರೋಗ______________

A.ಬೆರಿಬೆರಿ

B.ರಿಕೆಟ್ಸ್

C.ಸ್ಕರ್ವಿ

D.ಇರುಳು ಕುರುಡು

19.ಈ ಹಣ್ಣುಗಳ ಗುಂಪಿನಲ್ಲಿ ಹೆಚ್ಚಾಗಿರುವ ಜೀವಸತ್ವೆ__________________



A.ಬಿ

B.ಇ

C.ಸಿ

D.ಡಿ

20.ಈ ಕೆಳಗಿನ ಯಾವ ಚಿತ್ರ ಹಸಿ ಕಸವನ್ನು ಸೂಚಿಸುತ್ತದೆ.

1. 

2. 

3. 

4. 

A.1

B.2

C.3

D.4

21.ಈ ಚಿತ್ರವು ಯಾವ  ಕ್ರಿಯೆಯನ್ನು ಸೂಚಿಸುತ್ತದೆ.




A.ರಕ್ತ ಪರಿಚಲನೆ

B.ಉಸಿರಾಟ

C.ವಿಸರ್ಜನೆ

D.ಜೀರ್ಣಕ್ರಿಯೆ

22..ಈ ಕೆಳಗೆ ನೀಡಿರುವ ಭಾರತದ ಭೂಪಟದಲ್ಲಿ ಕ್ರಮಸಂಖ್ಯೆ ಅನುಗುಣವಾಗಿ ಭಾಗಗಳನ್ನು ಹೆಸರಿಸು



A. ಅರಬ್ಬಿ ಸಮುದ್ರ,ಬಂಗಾಳ ಕೊಲ್ಲಿ,ಹಿಂದೂ ಮಹಾಸಾಗರ,ಬೆಂಗಳೂರು

B. ಬೆಂಗಳೂರು,ಅರಬ್ಬಿ ಸಮುದ್ರ,ಬಂಗಾಳ ಕೊಲ್ಲಿ,ಹಿಂದೂ ಮಹಾಸಾಗರ

C. ಅರಬ್ಬಿ ಸಮುದ್ರ,ಬಂಗಾಳ ಕೊಲ್ಲಿ ,ಹಿಂದೂ ಮಹಾಸಾಗರ, ಬೆಂಗಳೂರು,

D. ಹಿಂದೂ ಮಹಾಸಾಗರ, ಬೆಂಗಳೂರು, ಅರಬ್ಬಿ ಸಮುದ್ರ,ಬಂಗಾಳ ಕೊಲ್ಲಿ

23.ಈ ಕೆಳಗೆ ನೀಡಿರುವ ಪದಗಳ ಯಾವ ಗುಂಪು ಕಾಡಿನ ಉಪಯೋಗವನ್ನು ಸೂಚಿಸುತ್ತವೆ.


A.ಶುದ್ದಗಾಳಿ,ಬೆಳಕು,ನೀರು, ಮೇಣ

B.ಮರಮುಟ್ಟು,ಶುದ್ದ ಗಾಳಿ ,ಮೇಣ,ರಬ್ಬರ್

C.ರಬ್ಬರ್,ಜೇನು ತುಪ್ಪ ,ಮಾಂಸ,ಆಹಾರ

D.ಗೊಂದು,ಸೊಪ್ಪು ತರಕಾರಿ,ಚಿನ್ನ,ಕಾಗದ

24. ಈ ಚಿತ್ರದಲ್ಲಿ ಕ್ರಮಸಂಖ್ಯೆಗನುಗುಣವಾಗಿ ಬರುವ ದಿಕ್ಕುಗಳ ಪಟ್ಟಿಯನ್ನು ಆಯ್ಕೆ ಮಾಡಿ.




A.ಆಗ್ನೇಯ,ನೈರುತ್ಯ,ವಾಯುವ್ಯ,ಈಶಾನ್ಯ

B.ನೈರುತ್ಯ,ವಾಯುವ್ಯ,ಈಶಾನ್ಯ,ಆಗ್ನೇಯ

C.ವಾಯುವ್ಯ,ಈಶಾನ್ಯ,ನೈರುತ್ಯ,ಆಗ್ನೇಯ

D.ಈಶಾನ್ಯ,ಆಗ್ನೇಯ,ನೈರುತ್ಯ,ವಾಯುವ್ಯ

======================================================================================

## ಗಣಿತ

--------------------------------------------------------------------------------------

1 .3594 ಈ ಸಂಖ್ಯೆಯಲ್ಲಿ ಅಡಿಗೆರೆ ಎಳೆದ ಸಂಖ್ಯೆಯ ಸ್ಥಾನ ಬೆಲೆ______________

A. 900

B. 90

C. 9

D. 0

2. 3820+2200 =___________

A. 6230

B. 5940

C. 6300

D. 6020

3. 5074–3267=______________________

A. 1807

B. 2107

C. 1806

D. 1805

4.ಗುಣ್ಯ x ಗುಣಕ =________________________

A.ಭಾಗಲಬ್ಧ

B.ಗುಣಲಬ್ಧ

C.ಶೇಷ

D.ವ್ಯವಕಲ್ಯ

5. 42/6 =___________________

A. 7

B. 6

C. 8

D. 10

6.ಸಾಮಾನ್ಯವಾಗಿ ವೃತ್ತದ ಕೇಂದ್ರ ಬಿಂದುವನ್ನು ________________ಇಂಗ್ಲೀಷ್ ಅಕ್ಷರದಿಂದ ಗುರುತಿಸುತ್ತಾರೆ.

A. r

B. d

C. O

D. c

7. ಈ ಹೇಳಿಕೆಯ ಸರಳ ರೂಪ 560+485-238= ____________

A. 708

B. 807

C. 907

D. 707

8. 1/2 ಈ ಸಂಖ್ಯೆ ______________ಭಿನ್ನರಾಶಿಗೆ ಉದಾಹರಣೆ.

A. ಮಿಶ್ರ ಭಿನ್ನರಾಶಿ

B. ವಿಷಮ ಭಿನ್ನರಾಶಿ

C. ಸಮಾನ ಭಿನ್ನರಾಶಿ

D. ಸಮ ಭಿನ್ನರಾಶಿ

9. 3/10 ನ್ನು ದಶಮಾಂಶ ರೂಪದಲ್ಲಿ ಬರೆದಾಗ_________________


A. 0.003

B. 0.3

C. 0.03

D. 0.003

10. ಈ ಕೆಳಗಿನ ಆಕೃತಿಯಲ್ಲಿ _______________ಕೋನಗಳಿವೆ.



A.ಎರಡು

B.ನಾಲ್ಕು

C.ಆರು

D.ಮೂರು

11. ಮೂರಂಕಿಯ ಅತಿದೊಡ್ಡ ಸಂಖ್ಯೆ _______________

A. 100

B. 989

C. 999

D. 101

12.ಒಂದು ಕೆ.ಜಿ. ಮಲ್ಲಿಗೆ ಹೂವಿನ ಬೆಲೆ 200 ರೂ ಆದರೆ 5 ಕೆ.ಜಿ ಮಲ್ಲಿಗೆ ಹೂವಿನ ಬೆಲೆ____________

A. 1000 ರೂ

B. 1250 ರೂ

C. 800 ರೂ

D. 500 ರೂ

13.ಒಬ್ಬ ವ್ಯಕ್ತಿಯು ಒಂದು ಸ್ಕೂಟರನ್ನು 9864 ರೂ ಗೆ ಕೊಂಡು 8576 ರೂಗೆ ಮಾರಿದರೆ ಅವನಿಗಾದ ನಷ್ಟ_____ರೂ.

A. 1288 ರೂ

B. 1388 ರೂ

C. 1277 ರೂ

D. 1187 ರೂ

14. 7623 x __________ = 0

A. 7623

B. 0

C. 1

D. 100

15.3x6+3x2=____________+6 =24


A. 15

B. 16

C. 17

D. 18

16. ಈ ಚಿತ್ರದಲ್ಲಿ ಗೆರೆ ಎಳೆದ ಭಿನ್ನರಾಶಿಯ ರೂಪ _______________



A. 3/4

B. 1

C. 1/2

D. 1/4

17. ಒಂದು ವೃತ್ತದಲ್ಲಿ ವೃತಕೇಂದ್ರದಿಂದ ವೃತ್ತದ ಮೇಲಿನ ಎಲ್ಲಾ ಬಿಂದುಗಳೂ ___________ದೂರದಲ್ಲಿರುತ್ತವೆ.

A. ಸಮ

B. ಅಸಮ

C. ವಿಷಮ

D. 100 ಮೀ

18.ಒಂದು ಆಕೃತಿಯು ಆಕ್ರಮಿಸಿರುವ ಸ್ಥಳ ಅಥವಾ ಪ್ರದೇಶವನ್ನು _____________ಎನ್ನುವರು

A.ಸುತ್ತಳತೆ

B.ವಿಸ್ತೀರ್ಣ

C. ಕರ್ಣ

D. ತ್ರಾಪಿಜ್ಯ

19. 1694 ರಲ್ಲಿ ಸ್ಥಾನಬೆಲೆಯು ಮುಖಬೆಲೆಗೆ ಸಮನಾಗಿರುವ ಸಂಖ್ಯಾಸೂಚಕ __________________

A. 1

B. 6

C. 9

D. 4

20. ಒಂದು ಡಬ್ಬದಲ್ಲಿ  546 ಕಿ.ಗ್ರಾಂ ತೂಕದ ಅಕ್ಕಿಯಿದೆ ,ಹಾಗಾದರೆ ಅಂತಹ 15 ಡಬ್ಬದಲ್ಲಿರುವ ಅಕ್ಕಿಯ ಒಟ್ಟು ಅಕ್ಕಿಯ ತೂಕವೆಷ್ಟು?


A. 8190 ಕಿ.ಗ್ರಾಂ

B. 8910 ಕಿ.ಗ್ರಾಂ

C. 8109 ಕಿ.ಗ್ರಾಂ

D. 9910 ಕಿ.ಗ್ರಾಂ

21.ಈ ಆಕೃತಿಯು ಯಾವ ಹೇಳಿಕೆಯನ್ನು ಪ್ರತಿನಿಧಿಸುತ್ತದೆ.



A. ವ್ಯಾಸವು ವೃತ್ತವನ್ನು 2 ಸಮ ಭಾಗಗಳನ್ನಾಗಿ ವಿಭಾಗಿಸುತ್ತದೆ.

B. ತ್ರಿಜ್ಯವು ವೃತ್ತವನ್ನು 2 ಸಮ ಭಾಗಗಳನ್ನಾಗಿ ವಿಭಾಗಿಸುತ್ತದೆ.

C. ಜ್ಯಾ ವು ವೃತ್ತವನ್ನು 2 ಸಮ ಭಾಗಗಳನ್ನಾಗಿ ವಿಭಾಗಿಸುತ್ತದೆ.

D. ವ್ಯಾಸವು ವೃತ್ತವನ್ನು 2 ಅಸಮ ಭಾಗಗಳನ್ನಾಗಿ ವಿಭಾಗಿಸುತ್ತದೆ.

22.. 4 ವಿದ್ಯಾರ್ಥಿಗಳು ಒಂದು ಬೆಂಚಿನಲ್ಲಿ ಕುಳಿತುಕೊಳ್ಳಲು ಸಾಧ್ಯವಾದರೆ , 64 ವಿದ್ಯಾರ್ಥಿಗಳು ಕುಳಿತುಕೊಳ್ಳಲು ಎಷ್ಟು ಬೆಂಚುಗಳು ಬೇಕು?


A. 16 ಬೆಂಚು

B. 64 ಬೆಂಚು

C. 128 ಬೆಂಚು

D. 8 ಬೆಂಚು

23.ಈ ಆಕೃತಿಯ ಸುತ್ತಳತೆಯನ್ನು ಕಂಡುಹಿಡಿದು ಗುರುತಿಸಿ____________



A. 29 ಸೆ.ಮೀ

B. 66 ಸೆ.ಮೀ

C. 36 ಸೆ.ಮೀ

D. 25 ಸೆ.ಮೀ

24. 5 , 8, 7 , 2 ಈ ಎಲ್ಲಾ ಸಂಖ್ಯೆಗಳನ್ನು ಉಪಯೋಗಿಸಿ ರಚಿಸಬಹುದಾದ ನಾಲ್ಕಂಕಿಯ ಅತಿದೊಡ್ಡ ಸಂಖ್ಯೆ ಮತ್ತು ಚಿಕ್ಕ ಸಂಖ್ಯೆ ಕ್ರಮವಾಗಿ

A. 8557 ಮತ್ತು 2578

B. 8752 ಮತ್ತು 2758

C. 8527 ಮತ್ತು 2875

D. 8752 ಮತ್ತು 2578

# ಧನ್ಯವಾದಗಳು